**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 7 ಫ್ರಾ.ಸಾ. : 4**

ಸಾಕ್ಷಿಯ ಹೆಸರು : ಮಾರುತಿ ನಾಯ್ಕು
ತಂದೆಯ ಹೆಸರು : ಫಕೀರ ನಾಯ್ಕು
ವಯಸ್ಸು : 53 ವರ್ಷ
ಉದ್ಯೋಗ : ಕೃಷಿ
ವಾಸ : ಕಾನಗೋಡ, ಸಿದ್ದಾಪುರ ತಾಲೂಕು.

**ದಿನಾಂಕಃ 08-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಹುಟ್ಟಿದಾಗಿನಿಂದ ನಮ್ಮ ಊರಿನಲ್ಲಿ ವಾಸ ಇದ್ದೇನೆ. ನಾನು ಲೋಕಾಯುಕ್ತರಿಗೆ ದಿಃ 16.08.2005 ರಲ್ಲಿ ದೂರನ್ನು ಕೊಟ್ಟಿರುತ್ತೇನೆ. 2001-02 ರಲ್ಲಿ ನಮ್ಮ ಊರು ಕಾನಗೋಡನಲ್ಲಿ ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ ಕಾಮಗಾರಿಗೆ ರೂ 20,00,000/- ಮಂಜೂರು ಆಗಿತ್ತು. ಅದರಲ್ಲಿ 210 ಶೌಚಾಲಯ ನಿರ್ಮಾಣ ಆಗಬೇಕಾಗಿತ್ತು. ಒಂದು ಶೌಚಾಲಯಕ್ಕೆ ರೂ 3,000/- ದಂತೆ 6,30,000/- ಶೌಚಾಲಯ ನಿರ್ಮಾಣ ಮಾಡಿಕೊಡುವ ಫಲಾನುಭವಿಗಳಿಗೆ ಹಣವನ್ನು ಗ್ರಾಮ ಪಂಚಾಯತಿ ಕೊಡಬೇಕಾಗಿತ್ತು. ಆ ಸಮಯದಲ್ಲಿ ಕಾನಗೋಡು ಗ್ರಾಮಪಂಚಾಯತಿಗೆ ಆರೋಪಿ ಅಧ್ಯಕ್ಷ ಆಗಿದ್ದರು. ಅವರು ನ್ಯಾಯಾಲಯದ ಮುಂದಿರುವ ಆರೋಪಿ ಆಗಿರುತ್ತಾರೆ. ಆ ಸಮಯದಲ್ಲಿ ಆರ್ ಪಿ ಹೆಗಡೆ ಎನ್ನುವವರು ಕಾರ್ಯದರ್ಶಿ ಆಗಿದ್ದರು. 2001-02 ರಲ್ಲಿ ಪ್ರಾರಂಭ ಆದರೂ 2005 ರವರೆಗೂ ಆ ಕಾಮಗಾರಿ ಮುಗಿಯಲಿಲ್ಲ. 210 ಫಲಾನುಭವಿಗಳಿಗೆ ಕೊಡಬೇಕಾಗಿದ್ದ ಶೌಚಾಲಯ ನಿರ್ಮಾಣದ ಸಹಾಯ ಧನವನ್ನು ನೀಡಲಿಲ್ಲ. 2005 ರಲ್ಲಿ ನಾನು ಸದರಿ ಗ್ರಾಮ ಪಂಚಾಯತಿಯಲ್ಲಿ ಸದಸ್ಯ ಆಗಿ ಆಯ್ಕೆ ಆದೆ. ಆಗ ಫಲಾನುಭವಿಗಳು ಸಹಾಯ ಧನದ ಹಣ ಕೊಡದೇ ಇರುವ ಬಗ್ಗೆ ನನ್ನನ್ನು ಪ್ರಶ್ನಿಸಿದರು. ಆಗ ನಮ್ಮ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಿದೆವು. ಈ ವಿಷಯದ ಬಗ್ಗೆ ಒಂದು ವಹಿ ಬಿಟ್ಟರೆ ಗ್ರಾಮ ಪಂಚಾಯತಿಯಲ್ಲಿ ಬೇರೆ ದಾಖಲಾತಿ ನಿರ್ವಹಿಸಿರಲಿಲ್ಲ. ಗ್ರಾಮ ಪಂಚಾಯತಿಯ

ಕಾರ್ಯದರ್ಶಿಯವರು ಬೇರೆ ವಹಿಗಳು ಅಥವಾ ದಾಖಲಾತಿಗಳು ಆ ಬಗ್ಗೆ ಇಲ್ಲಾ ಎಂದು ಹೇಳಿದರು. ನಾನು ಲಭ್ಯ ಇದ್ದ ದಾಖಲಾತಿಗಳನ್ನು ಪರಿಶೀಲಿಸಿದಾಗ ಅದರಲ್ಲಿ 111 ಫಲಾನುಭವಿಗಳ ಹೆಸರು ಇತ್ತು. ಅವರಲ್ಲಿ 49 ಜನ ಫಲಾನುಭವಿಗಳು ಮಾತ್ರ ಆ ಪುಸ್ತಕಕ್ಕೆ ಸಹಿ ಮಾಡಿದರು. ಆಗ ನನಗೆ ಅನುಮಾನ ಬಂತು. ನಾವು ಆಗ ಪಂಚಾಯತಿಯ ಸಭೆಯಲ್ಲಿ ಎಲ್ಲರೂ ಸೇರಿ ಈ ವಿಷಯವನ್ನು ಲೋಕಾಯುಕ್ತ ಕಛೇರಿಗೆ ದೂರು ನೀಡಬೇಕು ಎಂದು ತೀರ್ಮಾನಿಸಿದೆವು. ದಿನಾಂಕಃ 16.08.2005 ರಂದು ನಾನು ಗ್ರಾಮ ಪಂಚಾಯತಿ ಸದಸ್ಯ ಆಗಿ ವೆಯಕ್ತಿಕ ಆಗಿ ಕಾರವಾರದ ಲೋಕಾಯುಕ್ತ ಕಛೇರಿಯಲ್ಲಿ ದೂರನ್ನು ನೀಡಿದೆನು. ಈಗ ನ್ಯಾಯಾಲಯದ ಮುಂದೆ ಆ ದೂರು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಆ ದೂರನ್ನು ನಿಪಿ-1 ಎಂದು ಈಗಾಗಲೇ ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ರುಜುವನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದೂರನ್ನು ಕೊಟ್ಟ ಮೇಲೆ ದಿಃ 06.09.2005 ರಂದು ಪಂಚಾಯತಿಗೆ ಬಂದು ಲೋಕಾಯುಕ್ತ ನಿರೀಕ್ಷಕರು ಪ್ರಕರಣ ದಾಖಲು ಮಾಡಿಕೊಂಡರು. ದಿಃ 09.09.2005 ರಂದು ಲೋಕಾಯುಕ್ತ ನಿರೀಕ್ಷಕರು ನನ್ನನ್ನು ಕಾನಗೋಡು ಗ್ರಾಮ ಪಂಚಾಯತಿ ಕಛೇರಿಗೆ ಬರುವಂತೆ ಕರೆದರು. ಆಗ ಯಾವ ಯಾವ ಫಲಾನುಭವಿಗಳಿಗೆ ಶೌಚಾಲಯ ನಿರ್ಮಾಣ ಆಗಿದೆಯೋ ಅದನ್ನು ಪರಿಶೀಲಿಸಿ ಪಟ್ಟಿ ಮಾಡುತ್ತೇವೆ ಎಂದು ನಾನು ಬರಬೇಕು ಎಂದು ಹೇಳಿದರು. ಆಗ ನಾನು, ನಮ್ಮ ಗ್ರಾಮ ಪಂಚಾಯತಿಯ ಕಾರ್ಯದರ್ಶಿ ಮಂಜುನಾಥ ನಾಯ್ಕ, ಗ್ರಾಮ ಸಹಾಯಕ ಗೋಪಾಲ ಗಣಪತಿ ಮಡಿವಾಳ ಹಾಗೂ ಲೋಕಾಯುಕ್ತ ಕಛೇರಿಯ ಸಿಬ್ಬಂದಿ ಸೇರಿ ಕಾನಗೋಡು ಗ್ರಾಮಕ್ಕೆ ಸೇರಿದ ಕಾನಗೋಡು ಗಣೇಶ ನಗರ, ಹಳ್ಳಿ ಬೈಲು, ಸುಭಾಶ್ ನಗರ ಕ್ಕೆ ಭೇಟಿ ಕೊಟ್ಟು ಫಲಾನುಭವಿಗಳು ಶೌಚಾಲಯ ನಿರ್ಮಿಸಿದ್ದಾರೋ ಇಲ್ಲವೋ ಎಂದು ಪರಿಶೀಲನೆ ಮಾಡಿದೆವು. ಆಗ ಒಟ್ಟು 111 ಶೌಚಾಲಯಗಳು ನಿರ್ಮಾಣ ಆಗಿದೆ ಎಂದು ಕಂಡು ಬಂತು, ಅದರ ಪೈಕಿ ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ 99 ಶೌಚಾಲಯ ನಿರ್ಮಾಣ ಆಗಿದ್ದವು. ನಿರ್ಮಲ ಕರ್ನಾಟಕ ಯೋಜನೆ ಅಡಿಯಲ್ಲಿ 5 ಶೌಚಾಲಯ ನಿರ್ಮಾಣ ಆಗಿತ್ತು ಮತ್ತು 7 ಶೌಚಾಲಯಗಳನ್ನು ಸ್ವಂತ ಆಗಿ ನಿರ್ಮಾಣ ಮಾಡಿಕೊಂಡಿದ್ದರು. ಆದರೆ ಒಟ್ಟು 210 ಶೌಚಾಲಯಗಳು ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ ನಿರ್ಮಾಣ ಆಗಬೇಕಾಗಿತ್ತು. ಫಲಾನುಭವಿಗಳಿಗೆ ಸಹಾಯ ಧನದ ಹಣ ನೀಡದೇ ಬೇರೆ ಗುತ್ತಿಗೆದಾರ ಕಡೆಯಿಂದ ಆರೋಪಿ

ಶೌಚಾಲಯ ನಿರ್ಮಾಣದ ಕೆಲಸ ಮಾಡಿಸಿದ್ದರು ಎಂದು ಫಲಾನುಭವಿಗಳ ಕಡೆಯಿಂದ ಗೊತ್ತಾಯಿತು. ಲೋಕಾಯುಕ್ತ ನಿರೀಕ್ಷಕರು ಆ ಸಮಯದಲ್ಲಿ ಪಂಚನಾಮೆ ಮಾಡಿದರು. ನಾನು ಅದಕ್ಕೆ ರುಜು ಮಾಡಿದೆ. ಈಗ ಆ ಪಂಚನಾಮೆಯನ್ನು ನೋಡಿರುತ್ತೇನೆ, ಅದರಲ್ಲಿ ಕೊನೆಯ ಪುಟದಲ್ಲಿ ನನ್ನ ರುಜು ಇದೆ. ಆ ಪಂಚನಾಮೆಯನ್ನು ಈಗಾಗಲೇ ನಿಪಿ–28 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ರುಜುವನ್ನು ನಿಪಿ–28(ಸಿ) ಎಂದು ಗುರುತಿಸಲಾಯಿತು. ಇನ್ನೂ 111 ಶೌಚಾಲಯಗಳು ನಿರ್ಮಾಣ ಆಗದೇ ಇರುವುದು ಕಂಡು ಬಂತು. ಆ ಪಂಚನಾಮೆ ಸಮಯದಲ್ಲಿ ಲೋಕಾಯುಕ್ತ ನಿರೀಕ್ಷಕರು ಒಂದು ಪಟ್ಟಿ ತಯಾರಿಸಿದರು. ಅದು ಅನುಬಂಧ ಎ, ಬಿ ಮತ್ತು ಸಿ ಪ್ರಕಾರ ಇರುತ್ತದೆ. ಈಗ ಅದು ನ್ಯಾಯಾಲಯದ ಮುಂದೆ ಇದೆ. ಅದರಲ್ಲಿ ನನ್ನ ರುಜು ಇದೆ. ಈಗಾಗಲೇ ಆ ಅನುಬಂಧಗಳನ್ನು ನಿಪಿ–28(1) ರಿಂದ 28(3) ಎಂದು ಗುರುತಿಸಲಾಗಿದೆ. ಸಾಕ್ಷಿಯ ರುಜುವನ್ನು ಕೊನೆಯ ಪುಟದಲ್ಲಿ ನಿಪಿ–28/1(ಸಿ) ಯಿಂದ ನಿಪಿ–28/3(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದ**

2. ನಾನು ಬಿಜೆಪಿ ಪಕ್ಷಕ್ಕೆ ಸೇರಿದ್ದೇನೆ ಎಂದರೆ ಈಗ ನಾನು ಬಿಜೆಪಿ ಪಕ್ಷದಲ್ಲಿ ಇದ್ದೇನೆ. ಆಗ ನಾನು ಕೇವಲ ಗ್ರಾಮ ಪಂಚಾಯತಿ ಸದಸ್ಯ ಆಗಿದ್ದೆ. ನಾನು 2000 ನೇ ಸಾಲಿನಿಂದ ಕಾನಗೋಡು ಗ್ರಾಮದ ಬಿಜೆಪಿ ಪಕ್ಷದ ಮುಖ್ಯಸ್ಥ ಎಂದರೆ ಸರಿಯಲ್ಲ. 1 ನೇ ಆರೋಪಿ ಕ್ರಾಂಗ್ರೆಸ್ ಪಕ್ಷಕ್ಕೆ ಸೇರಿದ್ದಾರೆ ಎಂದರೆ ಈಗ ಕಾಂಗ್ರೆಸ್ ಪಕ್ಷದಲ್ಲಿ ಇದ್ದಾರೆ, ಹಿಂದೆ ಇರಲಿಲ್ಲ. ನಾನು 2000 ನೇ ಸಾಲಿನಿಂದ 1 ನೇ ಆರೋಪಿ ಮತ್ತು ಅಲ್ಲಿನ ಕಾಂಗ್ರೆಸ್ ಪ್ರತಿನಿಧಿಗಳ ವಿರುದ್ಧ ಅನೇಕ ದೂರುಗಳನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. 2000 ನೇ ಇಸ್ವಿಯಿಂದ ನಾನು ಕೊಮು ಪ್ರಚೋದನೆ ಮಾಡುವುದರ ಬಗ್ಗೆ ನನ್ನ ವಿರುದ್ಧ ಅನೇಕ ಪ್ರಕರಣಗಳು ದಾಖಲಾಗಿವೆ ಎಂದರೆ ಸರಿಯಲ್ಲ. ಗ್ರಾಮದಲ್ಲಿ ಅಕ್ಕ ಪಕ್ಕದ ಜನರ ಜೊತೆ ಮತ್ತು ಜಾತ್ರೆಯಲ್ಲಿ ನಾನು ಗಲಾಟೆ ಮಾಡಿದ ಬಗ್ಗೆ ನನ್ನ ವಿರುದ್ಧ ಪ್ರಕರಣಗಳು ದಾಖಲಾಗಿವೆ ಎಂದರೆ ಸರಿಯಲ್ಲ. 1 ನೇ ಆರೋಪಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದಾನೆ ಎಂಬ ಕಾರಣಕ್ಕೆ ರಾಜಕೀಯ ದುರುದ್ದೇಶದಿಂದ ಈ ಪ್ರಕರಣದಲ್ಲಿ ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

3. ಗ್ರಾಮ ಪಂಚಾಯತಿ ಮೂಲಕ ಯಾವುದೇ ಯೋಜನೆ ಬಂದಾಗ ಮೊದಲಿಗೆ ಗ್ರಾಮ ಪಂಚಾಯತಿ ಅಧ್ಯಕ್ಷರು ಮತ್ತು ಸಮಿತಿ ಆ ಬಗ್ಗೆ ಚರ್ಚೆ ಮಾಡುತ್ತದೆ ಎಂದರೆ ಹೌದು. ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಆ ಸಮಯದಲ್ಲಿ ಉಪಸ್ಥಿತರಿರುತ್ತಾರೆ ಎಂದರೆ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಧ್ಯಕ್ಷರು ಮತ್ತು ಸಮಿತಿಯವರು ಇರುತ್ತಾರೆ. ನನ್ನ ಅವಧಿಯಲ್ಲಿ ನಾನು ಪಂಚಾಯತಿ ಸದಸ್ಯ ಆಗಿದ್ದಾಗ ಅದೇ ರೀತಿ ಅಧ್ಯಕ್ಷರು, ಸಮಿತಿಯವರು ಮತ್ತು ಕಾರ್ಯದರ್ಶಿ ಸೇರಿ ಯೋಜನೆ ಬಗ್ಗೆ ಚರ್ಚೆ ಮಾಡುತ್ತಿದ್ದಾರಾ ಎಂದರೆ ನನ್ನ ಅವಧಿಯಲ್ಲಿ ಯಾವುದೇ ಯೋಜನೆ ಗ್ರಾಮ ಪಂಚಾಯತಿಯಲ್ಲಿ ಬರಲಿಲ್ಲ. ಇಂತಹ ಯೋಜನೆಗಳು ಬಂದಾಗ ಫಲಾನುಭವಿಗಳು ಯಾರು ಎಂದು ಆಯ್ಕೆ ಮಾಡಬೇಕಾಗುತ್ತದೆ ಎಂದರೆ ಹೌದು. ಆಗ ಎಲ್ಲರಿಗೂ ಪ್ರಚಾರ ಮಾಡಿ ನಂತರ ಪ್ರಕಟಣೆ ಹೊರಡಿಸಿ ಜನರ ಗಮನಕ್ಕೆ ಆಯ್ಕೆ ಬಗ್ಗೆ ತಂದು ನಂತರ ಯೋಜನೆ ಅನುಷ್ಠಾನ ಮಾಡಲಾಗುತ್ತದೆ ಎಂದರೆ ಹೌದು. 210 ಫಲಾನುಭವಿಗಳನ್ನು ಆರೋಪಿ ಅಧ್ಯಕ್ಷ ಆಗಿದ್ದಾಗ ಆಯ್ಕೆ ಮಾಡಲಾಯಿತು ಮತ್ತು ಅವರೆಲ್ಲರಿಗೂ ಹಣ ಕೊಡದೇ ಮೋಸ ಮಾಡಲಾಗಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಲಾನುಭವಿಗಳಿಗೆ ಹಣ ಕೊಡುವ ವ್ಯಕ್ತಿ ಪಂಚಾಯತಿಯ ಕಾರ್ಯದರ್ಶಿ ಹಾಗೂ ಇತರೇ ಅಧಿಕಾರಿಗಳು ಎಂದರೆ ಸರಿಯಲ್ಲ, ಅದು ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಆಗಿರುತ್ತಾರೆ. ಮೇಲ್ಕಂಡ ಯೋಜನೆ ನೇರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಜಿಲ್ಲಾ ಪಂಚಾಯತ ಹಾಗೂ ಕಾರ್ಯಯೋಜನಾ ಅಧಿಕಾರಿಗಳು ಜಿಲ್ಲಾ ಪಂಚಾಯತ ರವರ ಅಡಿಯಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ಫಲಾನುಭವಿಗಳಿಗೆ ಸಹಾಯ ಧನ ಹಣ ನೀಡದೇ ಗುತ್ತಿಗೆದಾರರ ಮೂಲಕ ಆರೋಪಿ ಶೌಚಾಲಯ ನಿರ್ಮಾಣ ಮಾಡಿಸಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಇಂತಹ ಯೋಜನೆ ಅನುಷ್ಠಾನ ಮಾಡುವಾಗ ಗ್ರಾಮ ಪಂಚಾಯತಿ ಕಛೇರಿಯಲ್ಲಿ ಏನೇನು ಪುಸ್ತಕಗಳನ್ನು, ವಹಿಗಳನ್ನು ನಿರ್ವಹಿಸುತ್ತಾರೆ ಎಂದರೆ ಅಭಿಯಂತರರಿಗೆ ಸಂಬಂಧಪಟ್ಟ ಅಂದಾಜು ಪಟ್ಟಿ, ಅದಕ್ಕೆ ಸಂಬಂಧಪಟ್ಟ ಚೆಕ್ ಪುಸ್ತಕ, ಪಾಸ್ ಪುಸ್ತಕ ಎಲ್ಲಾ ಇರುತ್ತದೆ. ಅಂತಹ ದಾಖಲಾತಿಗಳನ್ನು ನಾನು ಪರಿಶೀಲನೆ ಮಾಡಿಲ್ಲ. ದಿಃ 09.09.2005 ರಂದು ಪರಿಶೀಲನೆ

ಮಾಡಿದಾಗ ಕೇವಲ 111 ಶೌಚಾಲಯ ನಿರ್ಮಾಣ ಆಗಿರುವುದು ಮಾತ್ರ ಕಂಡು ಬಂತು ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಮತ್ತು ನಾನು ಮಾಡಿರುವ ಆರೋಪಗಳಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಛಾಯಾಚಿತ್ರಗಳನ್ನು ಸ್ಥಳ ಪರಿಶೀಲನೆ ಮಾಡಲಾಯಿತು ಎಂದು ಹೇಳಿದಾಗ ತೆಗೆದಿಲ್ಲ ಎಂದರೆ ಸರಿಯಲ್ಲ. ನಿಪಿ–28/1 ರಿಂದ 3 ದಾಖಲಾತಿಗಳಿಗೆ ಈ ಪ್ರಕರಣಕ್ಕೆ ಸಂಬಂಧ ಇಲ್ಲ ಮತ್ತು ಅವುಗಳನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಯಾವುದೇ ಫಲಾನುಭವಿಗಳು ನನ್ನನ್ನು ಅವರಿಗೆ ಸಹಾಯ ಧನ ಬಂದಿಲ್ಲ ಎಂದು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ನನ್ನದೇ ಹಿಂಬಾಲಕರವನ್ನು ಮುಂದಿಟ್ಟುಕೊಂಡು ಲೋಕಾಯುಕ್ತ ಪೊಲೀಸರೊಂದಿಗೆ ಶ್ಯಾಮಿಲಾಗಿ ಸುಳ್ಳು ಪ್ರಕರಣ ದಾಖಲು ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ಇದು ಸುಳ್ಳು ಪ್ರಕರಣ ಎಂದು ಗೊತ್ತಿದ್ದರೂ ಆರೋಪಿಯ ಮೇಲಿರುವ ದ್ವೇಷದ ಕಾರಣ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಮತ್ತು ಈ ಪ್ರಕರಣಕ್ಕೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ